# ಅಂದದ ಉಡುಪಿಗೆ ಹೂವಿನ ಒನಪು

**ಕಾಲ ಯಾವುದೇ ಇರಲಿ, ಏನೇ ಹೊಸ ಫ್ಯಾಷನ್ ಬಂದು ಹೋಗಲಿ, ಎಂದಿಗೂ ಔಟ್‌ಡೇಟೆಡ್ ಎನಿಸದ, ಹಾಗೆಯೇ ಸೌಂದರ್ಯದಲ್ಲಿ ಸಾಟಿಯಿಲ್ಲದ ವಿನ್ಯಾಸವೆಂದರೆ ಫ್ಲೋರಲ್ ಪ್ರಿಂಟ್. ಇದಕ್ಕೆ ಸಾಕ್ಷಿ ಎನ್ನುವಂತೆ ಈಗ ಫ್ಯಾಂಟಸಿ ಫ್ಲೋರಲ್ ವಿನ್ಯಾಸಿತ ವಸ್ತ್ರಗಳು ಮತ್ತೆ ಸದ್ದು ಮಾಡುತ್ತಿವೆ.**

**■ ಸುಮಲತಾ ಎನ್.**



ಕಚೇರಿಗಾಗಲೀ, ಪಾರ್ಟಿಗಾಗಲಿ, ಬೇಸಿಗೆಗಿರಲಿ, ಚಳಿಗಾಲಕ್ಕಿರಲಿ ಎಲ್ಲಕ್ಕೂ ಚಂದವಾಗಿ ಒಪ್ಪುವ, ಹಾಗೆಯೇ ಎಂದಿಗೂ ಔಟ್‌ಡೇಟೆಡ್ ಎನಿಸದ ಫ್ಯಾಷನ್ ಎಂದರೆ ಹೂವಿನ ವಿನ್ಯಾಸದ ಉಡುಪು. ರೆಟ್ರೊ ಫ್ಯಾಷನ್ ಎಂದು ಕರೆಸಿಕೊಳ್ಳುತ್ತಿದ್ದ ಈ ಇಂಡೊ ವೆಸ್ಟರ್ನ್ ಶೈಲಿಯ ಫ್ಯಾಂಟಸಿ ಫ್ಲೋರಲ್ ವಿನ್ಯಾಸಿತ ಉಡುಪುಗಳು ಮತ್ತೆ ಮುನ್ನೆಲೆಗೆ ಬಂದಿದ್ದು, ಹೊಸ ಹೊಸ ರೂಪದಲ್ಲಿ ಕಾಣಿಸಿಕೊಳ್ಳುತ್ತಿವೆ.

ದಿರಿಸನ್ನು ವರ್ಣಮಯವಾಗಿಸುವ ವಸ್ತ್ರವಿನ್ಯಾಸಕರ ಕಸರತ್ತಿಗೂ ಸುಲಭವಾಗಿ ಒಗ್ಗುವ ಈ ವಿನ್ಯಾಸ ಎಲ್ಲಾ ವಯೋಮಾನದವರಿಗೂ ಹೇಳಿಮಾಡಿಸಿದ್ದು. ಫ್ರಾಕ್‌ಗಳು, ಪ್ಯಾಂಟ್, ಡ್ರೆಸ್, ಸ್ಕರ್ಟ್, ಶ್ರಗ್, ಮ್ಯಾಕ್ಸಿ, ಪ್ಲೇಸೂಟ್, ಜಂಪರ್‌ಗಳು... ಅಷ್ಟೇ ಏಕೆ, ಬಾಂಬರ್ ಜಾಕೆಟ್, ಬ್ಲೇಜರ್‌ಗಳಲ್ಲಿಯೂ ಈ ಕಲ್ಪನಾತ್ಮಕ ಹೂವಿನ ವಿನ್ಯಾಸಗಳು ಮೇಳೈಸಿ ಹೊಸತೇ ನೋಟ ನೀಡಿವೆ. ಬೋಲ್ಡ್ ಆಗಿ ಕಾಣುವಂತೆ ಮಾಡುವ ಈ ಶೈಲಿ ಯುವತಿಯರಿಗೆ ಈಗ ಮೆಚ್ಚಿನ ಆಯ್ಕೆಯೂ ಆಗಿದೆ.

ಶಿಫಾನ್, ವೆಲ್ವೆಟ್, ಅರೆಪಾರದರ್ಶಕ ಬಟ್ಟೆಗಳಷ್ಟೇ ಅಲ್ಲದೆ, ರೇಷ್ಮೆ ಮಿಶ್ರಿತ ಬಟ್ಟೆಗಳಿಗೂ ಈ ವಿನ್ಯಾಸ ಒಪ್ಪವಾಗಿ ಕಾಣುವುದು ಫ್ಯಾಷನ್ ಕ್ಷೇತ್ರದಲ್ಲಿ ಈ ಶೈಲಿ ಮತ್ತೆ ಹೆಸರು ಮಾಡುತ್ತಿರಲು ಕಾರಣ. ಕಾಟನ್, ಜಾರ್ಜೆಟ್ ವಸ್ತ್ರಗಳಲ್ಲಿ ಕೂಡ ಈ ವಿನ್ಯಾಸ ಎದ್ದು ಕಾಣುತ್ತದೆ. ಪ್ರಿಂಟ್ ಜೊತೆಗೆ ಹೂವಿನ ವಿನ್ಯಾಸಿತ ಎಂಬ್ರಾಯ್ಡರಿ ಕಸೂತಿ ನವೀನ ನೋಟ ದಕ್ಕಿಸಿಕೊಟ್ಟಿವೆ. ಅದರಲ್ಲೂ ಟರ್ಟಲ್ ನೆಕ್ ಇರುವ ಫ್ಲೋರಲ್ ಫ್ರಾಕ್‌ಗಳು, ಮಿಡಿ ಡ್ರೆಸ್, ವಿ